ದಿನಾಂಕ 11-10-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ** ಪ್ರತಿವಾದಿ 1 ಮತ್ತು 2 ರವರ ಪರ ಶ್ರೀ ಎಸ್.ಆರ್.ಬಿ. ವಕೀಲರಿಂದ

21. ಸಕಲಬೇಣ ಗ್ರಾಮದ ಆಸ್ತಿಯಲ್ಲಿ 5 ಗುಂಟೆ ನನ್ನ ತಂದೆಗೆ 40 ವರ್ಷಗಳ ಹಿಂದೆ ಭಾಗದಲ್ಲಿ ಕೊಟ್ಟಿರುವುದರಿಂದ ಹಾಗೂ ಅದನ್ನು ನಾವು ಪ್ರಶ್ನಿಸದೆ ಇದ್ದುದರಿಂದ, ಈಗ ಬೇರೆ ಆಸ್ತಿಯಲ್ಲಿ ಭಾಗ ಕೇಳಲು ಹಕ್ಕಿಲ್ಲ ಎಂದರೆ ಸರಿಯಲ್ಲ. ಆ ಆಸ್ತಿ ಬಿಟ್ಟು ಬೇರೆ ದಾವಾ ಆಸ್ತಿಗಳೆಲ್ಲ ಪ್ರತಿವಾದಿಗಳ ತಂದೆಯ ಸ್ವರ್ಯಾಜಿತ ಆಸ್ತಿಗಳು ಎಂದರೆ ಸರಿಯಲ್ಲ. 2004 ರಲ್ಲಿ ಪ್ರತಿವಾದಿಗಳ ಕುಟುಂಬದಲ್ಲಿ ಅವರ ಆಸ್ತಿಗಳ ಬಗ್ಗೆ ಆದ ವಾಂಟಣಿ ಕಾಲಕ್ಕೆ ನನ್ನ ತಂದೆ ಜೀವಂತ ಇದ್ದರಾ ಎಂದರೆ ಸಾಕ್ಷಿ ಜೀವಂತ ಇದ್ದರು ಹಾಗೂ ವಾಂಟಣಿ ಮಾಡಿಲ್ಲ ಹಾಗೂ ನಮಗೆ ಗೊತ್ತಿಲ್ಲದೆ ಆಗಿದೆ ಎಂದು ನುಡಿಯುತ್ತಾರೆ. ಆ ವಾಂಟಣಿ 2004 ರಲ್ಲಿ ಆಗಿರುವ ಆಸ್ತಿಗಳು ಪ್ರತಿವಾದಿಗಳ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಡುವ ತನಕ ಆ ವಾಂಟಣಿಯನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಆ ವಾಂಟಣಿಯನ್ನು ಕಾಲಮಿತಿಯೊಳಗೆ ನಾವು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಹಾರವಾಡ ಗ್ರಾಮದ ಸರ್ವೆ ನಂ.327 ಹೊರತುಪಡಿಸಿ ಎಲ್ಲ ಆಸ್ತಿಗಳು ಅವಿಭಕ್ತ ಕುಟುಂಬದ ಆಸ್ತಿಗಳಲ್ಲ ಹಾಗೂ ಉಳಿದ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

22. ಸರ್ಕಾರದಿಂದ ಇರತಕ ಸೌಲಭ್ಯಗಳನ್ನು ಪಡೆಯಲ್ಲಿ ಹಾಗೂ ನಮ್ಮ ಅಂಶದ ಜಮೀನುಗಳನ್ನು ಅಭಿವೃದ್ದಿ ಪಡಿಸಲು ಆ ಕುರಿತು ಸರ್ಕಾರಕ್ಕೆ ಅರ್ಜಿಸಲಿಸುವ ಸಂದರ್ಭದಲ್ಲಿ ಪ್ರತ್ಯೇಕ ಪಹಣಿ ಪತ್ರಿಕೆಯನ್ನು ಸಾದರಪಡಿಸಲು ಸಾಧ್ಯಪಡಿಸಲು ಇದ್ದದ್ದು ಯಾವಾಗ ಎಂದರೆ ಸಾಕ್ಷಿ 7-8 ವರ್ಷಗಳ ಹಿಂದೆ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಸಕಲಬೇಣ ಗ್ರಾಮದ ಸರ್ವೆ ನಂ.102 ಅ 1 ಬ

ಹಿಸ್ಸಾ 74 ರಲ್ಲಿ 5 ಗುಂಟೆ ನನ್ನ ತಂದೆಯ ಹೆಸರಿನಲ್ಲಿತ್ತು ಎಂದರೆ ಸರಿ. ಆದ್ದರಿಂದ ನಾನು ಹೇಳಿದಂತೆ ದಾವೆಯಲ್ಲಿ ಹೇಳಿದಂತೆ ದಿನಾಂಕದಂದು ದಾವಾ ಕಾರಣ ಉದ್ಭವಾಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯರಲ್ಲಿ ನಾನು ಯಾವತ್ತು ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸರಿಯಾದ ನ್ಯಾಯಾಲಯದ ಶುಲ್ಕ ಕೂಡ ಪಾವತಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ದಾವೆಯಲ್ಲಿ ಕೇಳಿದ ಬೇಡಿಕೆಯನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರಿಗೆ ಭಾಗದಲ್ಲಿ ಕೊಟ್ಟ ಜಮೀನಿಗೆ ಅವರು ಪೂರ್ಣ ಹಕ್ಕುದಾರರು ಹಾಗೂ ಮಾಲೀಕರು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.